ಅಪ್ಪ ಸೈನಿಕನಾಗಿದ್ದ ಮತ್ತು ಮೊದಲ ಮಹಾಯುದ್ಧದ ಸಮಯದಲ್ಲಿಯಂತೂ ಅವನಿಗೆ ಮನೆಗೆ ಬರಲು ಸಮಯವೇ ಇರಲಿಲ್ಲ. ಹೀಗಾಗಿ ಐದು ವರ್ಷದ ಹುಡುಗನಾಗುವತನಕ ನಾನು ಅಪ್ಪನನ್ನು ಹೆಚ್ಚುಕಡಿಮೆ ನೋಡಿರಲೇ ಇಲ್ಲ ಎನ್ನಬಹುದು. ನೋಡಿದ್ದರೂ ಅದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡಿರಲಿಲ್ಲ. ಯಾಕೆಂದರೆ ಆತ ಯಾವಾಗಲೋ ಬರುತ್ತಿದ್ದ ಮತ್ತು ಯಾವಾಗಲೋ ಹೋಗುತ್ತಿದ್ದ. ಅಷ್ಟಾಗಿಯೂ ಅವನ ಭೇಟಿಗಳು ನನಗೆ ತುಂಬ ಖುಷಿಕೊಡುತ್ತಿದ್ದವು. ಯಾಕೆಂದರೆ ಆತ ಬಂದು ಹೋದಾಗಲೆಲ್ಲ ತಾನು ಭಾಗವಹಿಸಿದ ಯುದ್ಧದ ನೆನಪಿಗೆಂದು ಕೆಲವು ಅಪರೂಪದ ವಸ್ತುಗಳನ್ನು ಬಿಟ್ಟುಹೋಗಿರುತ್ತಿದ್ದ. ಆದರೆ ದುಃಖದ ಒಂದು ವಿಷಯವೆಂದರೆ ಪ್ರತಿ ಮುಂಜಾನೆ ನಾನು ನನ್ನ ಕೋಣೆಯಿಂದ ಎದ್ದು ಸೀದಾ ಅವ್ವನ ಹಾಸಿಗೆಯಲ್ಲಿ ಹೋಗಿ ಮಲಗುವ ರೂಢಿ ಅಪ್ಪ ಬಂದಾಗ ತಪ್ಪಿಹೋಗುತ್ತಿತ್ತು.

ಯುದ್ಧಕಾಲವೆ ನನ್ನ ಜೀವನದ ಅತ್ಯಂತ ನೆಮ್ಮದಿಯ ಕಾಲವಾಗಿತ್ತು ಎಂದರೆ ತಪ್ಪೇನಿಲ್ಲ. ಎಲ್ಲದಕ್ಕೂ ಸಮಾಧಾನ ಎನಿಸುವ ಉತ್ತರ ಕೊಡುವ ಅವ್ವ ನಮ್ಮ ಮನೆಯಲ್ಲಿ ಮತ್ತೊಂದು ಮಗು ಬರುವ ವಿಷಯ ಬಂದಾಗ ಮಾತ್ರ ತುಂಬ ಹಾರಿಕೆಯ ಉತ್ತರಗಳನ್ನು ಕೊಟ್ಟು ಜಾರಿಕೊಳ್ಳುತ್ತಿದ್ದಳು. ನಮ್ಮ ಅಕ್ಕಪಕ್ಕದ ಮನೆಗಳಲ್ಲಿ, ಆ ಕಡೆ ಈ ಕಡೆ ಓಣಿಯ ಮನೆಗಳಲ್ಲಿ ಮತ್ತೊಂದು ಮಗು ಇರುವಾಗ ನಮ್ಮ ಮನೆಯಲ್ಲಿ ಏಕಿಲ್ಲ ಎಂಬ ನನ್ನ ಪ್ರಶ್ನೆಗೆ ಅವ್ವ "ನಿನ್ನ ಅಪ್ಪ ಯುದ್ಧದಿಂದ ಮರಳದ ಹೊರತು ಇನ್ನೊಂದು ಮಗು ಆಗಲಾರದು" ಎನ್ನುತ್ತಿದ್ದಳು. ಇನ್ನೊಂದು ಮಗುವನ್ನು ಸಾಕುವಷ್ಟು ದುಡ್ಡನ್ನು ಗಳಿಸಿದ ಮೇಲೆ ನಾವು ಹೊಸ ಮಗುವಿನ ಬಗ್ಗೆ ಆಲೋಚನೆ ಮಾಡೋಣ ಎನ್ನುತ್ತಿದ್ದಳು. ಆಗಂತೂ ನನಗೆ ವಿಪರೀತ ಕೋಪ ಬರುತ್ತಿತ್ತು. ನಮಗಿಂತ ಬಡವರಿರುವ ಮನೆಯಲ್ಲಿ ಅದು ಸಾಧ್ಯ ಇರುವಾಗ ಅವ್ವ ಹಣಕಾಸಿನ ವಿಚಾರ ಯಾಕೆ ತರುತ್ತಾಳೆ ಎಂದು ಸಿಟ್ಟುಬರುತ್ತಿತ್ತು.

ಆವತ್ತು ಸಹ ನಾನು ಎಂದಿನಂತೆ ಬೆಳಿಗ್ಗೆ ಬೇಗನೆ ಎದ್ದು ಅವ್ವನ ಕೋಣೆಗೆ ಹೋಗಿ ಅವಳ ವಿಶಾಲವಾದ ಹಾಸಿಗೆಯ ಮೇಲೆ ಉರುಳಿಕೊಂಡೆ. ಅದು ಇದು ಮಾತಾಡುತ್ತ ಅಂದು ತಾವು ಇಬ್ಬರೂ ಸೇರಿ ಏನೇನೆಲ್ಲ ಮಾಡುವವರಿದ್ದೇವೆ ಎಂದು ಚರ್ಚಿಸುತ್ತಿದ್ದೆ. ಅವ್ವ ಹೂಂಗುಟ್ಟುತ್ತಿರುವಂತೆಯೇ ನಾನು ಮತ್ತೆ ನಿದ್ದೆಗೆ ಹೋಗಿರುತ್ತಿದ್ದೆ. ಅವಳ ಪ್ರೇಮ ತುಂಬಿದ ಮಾತೆಂದರೆ ಹಾಗೆ – ಅವು ನನ್ನನ್ನು ತಟ್ಟಿ ಮಲಗಿಸಿದಂತೆ ಅನಿಸುತ್ತಿತ್ತು. ನನಗೆ ಮತ್ತೆ ಎಚ್ಚರವಾದಾಗ ಅವ್ವ ಅಡುಗೆಮನೆಯಲ್ಲಿ ಬೆಳಗಿನ ಉಪಾಹಾರದ ವ್ಯವಸ್ಥೆ ಮಾಡುವಲ್ಲಿ ನಿರತಳಾಗಿರುತ್ತಿದ್ದಳು. ಅಂದು ನಾವು ಮುಂಜಾನೆಯ ತಿಂಡಿ ತಿಂದು ಪೇಟೆಗೆ ಹೋದೆವು. ಅವ್ವನೊಡನೆ ಮಾರ್ಕೆಟಿಗೆ ಹೋಗುವದೆಂದರೆ ನನಗೆ ಖುಷಿಯೋ ಖುಷಿ. ಅವ್ವ ನನ್ನನ್ನೂ ಚರ್ಚಿಗೆ ಕರೆದುಕೊಂಡು ಹೋದಳು. ಅಲ್ಲಿ ಪ್ರಾರ್ಥನೆ ಸಲ್ಲಿಸಿದ ನಂತರ ಅಂಗಡಿಗಳಲ್ಲಿ ಅದು ಇದು ಎಂದು ಅವ್ವ ಮನೆ ಸಾಮಾನುಗಳನ್ನು ಖರೀದಿಸಿದಳು. ಮಧ್ಯಾಹ್ನದ ಹೊತ್ತಿಗೆ ತಿರುಗಿ ಬಂದು ಊಟ ಮಾಡಿದೆವು. ಸಾಯಂಕಾಲ ಒಂದು ಸುತ್ತ ಅಡ್ಡಾಡಿಬರುವುದು ರೂಢಿ. ಅವ್ವ ಆಗ ನನ್ನನ್ನು ಕರೆದೇ ಕರೆಯುತ್ತಾಳೆ. ಅಲ್ಲದೆ ಸಂತ ಡೊಮಿನಿಕ್ ಚರ್ಚಿನ ಗೆಳತಿಯನ್ನು ಭೇಟಿ ಮಾಡುವುದನ್ನು ಅವ್ವ ಎಂದಿಗೂ ಮರೆಯುತ್ತಿರಲಿಲ್ಲ. ಅಲ್ಲಿ ಅವಳ ಹಲವಾರು ಸ್ನೇಹಿತರು ನಮ್ಮ ಕುಟುಂಬದ ಒಳಿತಿಗಾಗಿ ದೇವನಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಅಪ್ಪನ ಸುರಕ್ಷಿತ ಮರಳುವಿಕೆಗಾಗಿ ಅವರು ಆ ದಿನವೂ ಕೇಳಿಕೊಂಡರು. ಯಾಕೆಂದರೆ ಅವ್ವನ ಪ್ರಾರ್ಥನೆ ಯಾವಾಗಲೂ ಯುದ್ಧಕ್ಕೆ ಹೋಗಿರುವ ಅಪ್ಪ ಸುರಕ್ಷತೆಯಿಂದ ಹಿಂತಿರುಗಲಿ ಎಂಬುದೇ ಆಗಿರುತ್ತಿತ್ತು. ನಾನು ಸಹಿತ ದಿನಾಲೂ ಮಲಗುವ ಮುನ್ನ ದೇವರೆ, ನನ್ನ ತಂದೆಯನ್ನು ಶೀಘ್ರವೇ ಸುರಕ್ಷಿತವಾಗಿ ಮನೆಗೆ ಕಳುಹಿಸು ಎಂದು ನನ್ನ ಅಹವಾಲು ಸಲ್ಲಿಸಿ ನಿದ್ದೆಗೆ ಜಾರುತ್ತಿದ್ದೆ.

ಹೀಗೆ ಒಂದು ಬೆಳಿಗ್ಗೆ ನಾನು ಎದ್ದು ರೂಢಿಯಂತೆ ಅವ್ವನ ಹಾಸಿಗೆಗೆ ಹೋದೆ. ಅಲ್ಲಿ ಅಪ್ಪ ಇದ್ದುದನ್ನು